# ಆಲೂರಿನ ಸಿವಿಲ್ ಜಡ್ಜ್ ಹಾಗೂ ಜೆ ಎಂ ಎಫ್ ಸಿ ರವರ ನ್ಯಾಯಾಲಯ

**ಸಿಸಿ ನಂಃ 245/2016**

ಪಿರ್ಯಾದಿಃ- ಸರ್ಕಾರದ ಪರವಾಗಿ ಆಲೂರು ಪೋಲೀಸ್ ಠಾಣೆ

ವಿರುದ್ದ

ಆರೋಪಿತರುಃ

1. ಸಯದ್ ಸಲ್ಮಾನ್, ತಂದೆಃ ಗುಲ್ಬ್‌ದಸ್ತಗಿರ್,
   ಪ್ರಾಯಃ 25 ವರ್ಷ, ಕೂಲಿ ಕೆಲಸ,
   ವಾಸಃ ನಂ.310ಃಎ, 1ನೇ ಹಂತ, 9ನೇ ಕ್ರಾಸ್,
   ಬೆಲ್ಲಟ್ಟ ಗ್ರಾಮ, ಮೈಸೂರು ಜಿಲ್ಲೆ.
2. ಮುಭಾರಕ್ ಪಾಷ, ತಂದೆಃ ರಿಜ್‌ವಾನ್ ಪಾಷ,
   ಪ್ರಾಯಃ 25 ವರ್ಷ, ಕೂಲಿ ಕೆಲಸ,
   ವಾಸಃ 1ನೇ ಕ್ರಾಸ್, ಉಮರ್ ಪರುಕ್ ಮಸೀದಿ
   ಹತ್ತಿರ, ಅಂಬೇಡ್ಕರ್ ನಗರ, ಹಾಸನ.

## ದೋಷಾರೋಪಣೆ

ಆಶಾ ಕೆ.ಎಸ್, ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು ಆಲೂರು, ಆದ ನಾನು ನಿಮ್ಮ ವಿರುದ್ದ ಈ ಕೆಳಕಂಡಂತೆ ದೋಷರೊಪಣಿ ಮಾಡುತ್ತಿದ್ದೇನೆ.

ದಿನಾಂಕಃ10-5-2015ರಂದು ರಾತ್ರಿ ವೇಳೆಯಲ್ಲಿ ಆಲೂರು ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ಹೊಸೂರು ಕಾಲೋನಿ ಗ್ರಾಮದಲ್ಲಿ ಚಾಸಾ-1 ಸುಧಾರವರ ಬಾಪ್ತು ವಾಸದ ಮನೆಯ ಬೀಗವನ್ನು ಒಂದು ಕಬ್ಬಿಣದ ರಾಡಿನಿಂದ ಒಡೆದು ಮನೆಯೊಳಗೆ ಅತಿಕ್ರಮ ಪ್ರವೇಶ ಮಾಡಿರುವ ಮೂಲಕ ಭಾರತ ದಂಡ ಸಂಹಿತೆಯ

ಕಲಂ 457ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಅರೋಪ ಮಾಡಲಾಗಿದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ಆರೋಪಿತರಾದ ನೀವು ಒಂದು ಕಬ್ಬಿಣದ ರಾಡಿನಿಂದ ಚಾಸಾ-1ರವರ ಬಾಪ್ತು ವಾಸದ ಮನೆಯ ಬೀಗ ಒಡೆದು ಮನೆಯೊಳಗೆ ನುಗ್ಗಿ ಮನೆಯೊಳಗಿದ್ದ ಬೀರುವಿನ ಬಾಗಿಲನ್ನು ಮೀಟಿ ಬೀರುವಿನೊಳಗಿದ್ದ ಸುಮಾರು 1,70,000-00 ಬೆಲೆಯ ಚಿನ್ನ ಮತ್ತು ಬೆಳ್ಳಿಯ ಆಭರಣಗಳನ್ನು ಕಳ್ಳತನ ಮಾಡಿಕೊಂಡು ಹೋಗಿರುವ ಮೂಲಕ ಭಾರತ ದಂಡ ಸಂಹಿತೆಯ ಕಲಂ 380ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞೆಯೊಳಗೆ ಮಾಡಿರುತ್ತೀರಿ ಎಂದು ಅರೋಪ ಮಾಡಲಾಗಿದೆ.

ಪ್ರಶ್ನೆಃ1ಃ ಈಗ ಓದಿ ಹೇಳಿದ ವಿಷಯವು ನಿಮಗೆ ಅರ್ಥವಾಯಿತೆ?

ಉತ್ತರಃ-ಆ.1

ಆ.2

ಪ್ರಶ್ನೆಃ ತಪ್ಪಾಯಿತೆನ್ನುವಿರೋ ಅಥವಾ ವಿಚಾರಣೆಯಾಗಬೇಕೆ?

ಉತ್ತರಃ-ಆ.1

ಆ.2

(ಮೇಲ್ಕಂಡ ದೋಷಾರೋಪಣೆಯನ್ನು ಆರೋಪಿತರಿಗೆ ತಿಳಿದ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಅವರಿಂದ ಬಂದ ಉತ್ತರವನ್ನು ಸರಿಯಾಗಿ ಬರೆದಿದ್ದೇನೆಂದು ಧೃಡೀಕರಿಸಿರುತ್ತೇನೆ.)

ಸ್ಥಳಃ ಆಲೂರು
ದಿನಾಂಕಃ 24-6-2016.

ಸಿವಿಲ್ ಜಡ್ಜ್ ಹಾಗೂ ಜೆಎಂಎಫ್‌ಸಿ,
ಆಲೂರು.